**MVC-1822/2023** **ಪಿ.ಡಬ್ಲ್ಯೂ-1 (ಶಶಿಕಲಾ)**

ದಿನಾಂಕಃ **17.02.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಜಿ.ಕೆ.ಪಿ. ವಕೀಲರಿಂದಃ</u>**

ಪ್ರಸ್ತುತ ನಾನು ಮೈಸೂರಿನ ದ್ಯುತಿ ಮೋಟಾರ್ಸ್ ನಲ್ಲಿ ಕೆಲಸ ಮಾಡುತ್ತಿದ್ದು, ತಿಂಗಳಿಗೆ 12,000/- ಸಂಬಳ ಪಡೆಯುತ್ತಿದ್ದೇನೆ. ಪ್ರತಿವಾದಿ 3 ಮತ್ತು 4 ಮಾವ ಅತ್ತೆ ಆಗಿದ್ದು, ಅವರ ವಯಸ್ಸು ಕ್ರಮವಾಗಿ 65 ಮತ್ತು 55 ವರ್ಷ ವಯಸ್ಸಾಗಿರಬಹುದು. ನನಗೆ ಮಕ್ಕಳಿಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಊರಿನವರಿಂದ ಕೇಳಿ ತಿಳಿದುಕೊಂಡಿರುತ್ತೇನೆ. ನನ್ನ ಗಂಡ ಸ್ವಿಗ್ಗಿ ಮತ್ತು ಜೋಮೋಟೋ ಕಂಪನಿಯ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದರು. ಮೊದಲ ಬಾರಿ ಮೃತ ದೇಹವನ್ನು ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಗ್ರಾಹಕರ ಆರ್ಡರ್ ಆಧಾರದ ಮೇರೆಗೆ ತಿಂಗಳಿಗೆ ಸುಮಾರು 30,000/- ಮೇಲ್ಪಟ್ಟು ಸಂಪಾದಿಸುತ್ತಿದ್ದರು. ವೇತನ ಅವರ ಖಾತೆಗೆ ಜಮೆಯಾಗುತ್ತಿತ್ತು. ಬ್ಯಾಂಕ್ ಖಾತೆ ಅಥವಾ ಪಾಸ್ ಪುಸ್ತಕವನ್ನು ನಾನು ಹಾಜರುಪಡಿಸಿಲ್ಲ. ಪರಿಹಾರ ಪಡೆಯುವ ಸಲುವಾಗಿ ನನ್ನ ಗಂಡ 30,000/- ರೂ. ಸಂಪಾದಿಸುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಗಂಡನ ತಪ್ಪಿನಿಂದಲೇ ಅಪಘಾತವಾಗಿರುತ್ತದೆ, ಕಾರಿನ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಸಂಪಾದನೆ ಮೇಲೆ ನಾವು ಅವಲಂಬಿಸಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**1 ನೇ ಅಪರ ಹಿರಿಯ ಸಿಜೆ ಮತ್ತು ಎಂಎಸಿಟಿ.,**
**ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**